# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ಬೆಳಗಾವಿ-591156

# ವಿದ್ಯಾವಿಷಯಕ್ ಪರಿಷತ್ತಿನ ಸಭೆಯ ನಡಾವಳಿಗಳು

ದಿನಾಂಕ : ಶನಿವಾರ 21-09-2019

ಸಮಯ : ಮುಂಜಾನೆ 11: 30 ಘಂಟೆ

ಸ್ಥಳ : ಕುವೆಂಪು ಸಭಾಂಗಣ, ರಾ.ಚ.ವಿ.ವಿ.ಬೆ.

# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ **ವಿದ್ಯಾವಿಷಯಕ್ ಪರಿಷತ್ತಿನ ಸಾಮಾನ್ಯ ಸಭೆಯು** ದಿನಾಂಕ **21 ಸೆಪ್ಟೆಂಬರ್ 2019** ರಂದು **ಮುಂಜಾನೆ 11.30** ಘಂಟೆಗೆ ಹಾಜರಿದ್ದ/ಹಾಜರಾಗದ ಸದಸ್ಯರುಗಳ ವಿವರ.

## I. ಹಾಜರಿದ್ದ ಸದಸ್ಯರು

| | | |
|---|---|---|
| 1. | **ಪ್ರೊ. ಎಂ. ರಾಮಚಂದ್ರಗೌಡ** | **ಕುಲಪತಿಗಳು ಹಾಗೂ ಅಧ್ಯಕ್ಷರು** |
| 2. | ಪ್ರೊ. ಎಮ್. ಎನ್. ಮಾವಿನಕಟ್ಟಿ | ಸದಸ್ಯರು |
| 3. | ಡಾ. ವ್ಹಿ. ಬಿ. ಗ್ರಾಮಪುರೋಹಿತ | ಸದಸ್ಯರು |
| 4. | ಡಾ. ಎಚ್. ಐ. ತಿಮ್ಮಾಪೂರ | ಸದಸ್ಯರು |
| 5. | ಪ್ರೊ. ಜೆ.ಎಸ್. ಚಿಟ್‌ಕೂರ | ಸದಸ್ಯರು |
| 6. | ಡಾ. ಎಸ್.ಸಿ.ಮಠಪತಿ | ಸದಸ್ಯರು |
| 7. | ಡಾ. ಎಂ.ಹೆಚ್ ಚಲವಾಡಿ | ಸದಸ್ಯರು |
| 8. | ಪ್ರೊ. ಎಚ್.ವೈಯ್. ಕಾಂಬಳೆ | ಸದಸ್ಯರು |
| 9. | ಪ್ರೊ.(ಶ್ರೀಮತಿ) ಮನಿಶಾ ನೇಸರಕರ | ಸದಸ್ಯರು |
| 10. | ಪ್ರೊ. ಎಸ್.ಸಿ. ಪಾಟೀಲ | ಸದಸ್ಯರು |
| 11. | ಪ್ರೊ. ವಾಯ್.ಎಸ್. ಬಲವಂತಗೊಳ | ಸದಸ್ಯರು |
| 12. | ಪ್ರೊ. ಕೆ.ಎಲ್.ಎನ್. ಮೂರ್ತಿ | ಸದಸ್ಯರು |
| 13. | ಪ್ರೊ. ಡಿ.ಎನ್.ಪಾಟೀಲ | ಸದಸ್ಯರು |
| 14. | ಪ್ರೊ. ವ್ಹಿ.ಬಿ. ಅವಟಿ | ಸದಸ್ಯರು |
| 15. | ಪ್ರೊ. ವ್ಹಿ. ಎಂ. ಬಂಕಾಪೂರ, (ಗ್ರಂಥಪಾಲರು) | ಸದಸ್ಯರು |
| 16. | ಪ್ರೊ. ಕೆ.ಬಿ.ಚಂದ್ರಿಕಾ, ನಿರ್ದೇಶಕರು, ವಿದ್ಯಾರ್ಥಿ ಕಲ್ಯಾಣ | ಸದಸ್ಯರು |
| 17. | ಪ್ರೊ. ಎಚ್.ವೈಯ್. ಕಾಂಬಳೆ, (ಯೋ.ಮೇ.ಮೌ ಮಂಡಳಿ) | ಸದಸ್ಯರು |
| 18. | ಪ್ರೊ. ಎಸ್.ಎಂ. ಹುರಕಡ್ಲಿ, ನಿರ್ದೇಶಕರು, ಸಿ.ಡಿ.ಸಿ. | ಸದಸ್ಯರು |
| 19. | ಪ್ರೊ. ರಂಗರಾಜ ವನದುರ್ಗ **ಕುಲಸಚಿವರು(ಮೌಲ್ಯಮಾಪನ)** | ಸದಸ್ಯರು |
| 20. | ಪ್ರೊ. ಬಸವರಾಜ ಪದ್ಮಶಾಲಿ | **ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು** |

## II. ಹಾಜರಾಗದ ಸದಸ್ಯರು

| | | |
|---|---|---|
| 1. | ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ | ಸದಸ್ಯರು |
| 2. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ | ಸದಸ್ಯರು |
| 3. | ಶ್ರೀ. ಅರುಣ ಶಾಹಪೂರ, ಸನ್ಮಾನ್ಯ ವಿಧಾನ ಪರಿಷತ್ ಸದಸ್ಯರು | ಸದಸ್ಯರು |
| 4. | ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ, ಸನ್ಮಾನ್ಯ ಶಾಸಕರು | ಸದಸ್ಯರು |
| 5. | ಶ್ರೀ. ಶ್ರೀನಿವಾಸ ಮಾನೆ ಸನ್ಮಾನ್ಯ ವಿಧಾನ ಪರಿಷತ್ ಸದಸ್ಯರು | ಸದಸ್ಯರು |
| 6. | ಶ್ರೀ. ಶಂಕರಾನಂದ ಬನಶಂಕರಿ, **ಹಣಕಾಸು ಅಧಿಕಾರಿಗಳು** | ಸದಸ್ಯರು |
| 7. | ಶ್ರೀ. ಸತ್ಯಾನಂದ ಪಟೊಟಿ | ಸದಸ್ಯರು |
| 8. | ಶ್ರೀಮತಿ. ಮೃನಾಲಿನಿ ಪಟ್ಟನ | ಸದಸ್ಯರು |

# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

**ವಿದ್ಯಾಸಂಗಮ, ಬೆಂಗಳೂರು-ಪೂನಾ ರಾ.ಹೆ.-4, ಬೆಳಗಾವಿ-591156**

## ವಿದ್ಯಾವಿಷಯಕ್ ಪರಿಷತ್ ಪ್ರಾಧಿಕಾರ ಸಭೆಯ ನಡುವಳಿಗಳು

**ವಿಷಯ:** ದಿನಾಂಕ **21 ಸೆಪ್ಟೆಂಬರ್ 2019** ರಂದು ಜರುಗಿದ ವಿಶ್ವವಿದ್ಯಾಲಯದ ವಿದ್ಯಾವಿಷಯಕ್ ಪರಿಷತ್ ಪ್ರಾಧಿಕಾರ ಸಭೆಯ ನಡುವಳಿಗಳು

**ಉಲ್ಲೇಖ:** 1. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ (30)(2) ಮತ್ತು 31

2. ಮಾನ್ಯ ಕುಲಪತಿಗಳ ಸಭೆ ನಡೆಸಲು ನೀಡಿದ ಅನುಮೋದನೆ ದಿ: 13-09-2019
3. ವಿದ್ಯಾವಿಷಯಕ್ ಪರಿಷತ್ ಪ್ರಾಧಿಕಾರ ಸಭೆ ನೋಟಿಸ್ ದಿನಾಂಕ: 13-09-2019

**ಪ್ರಸ್ತಾವನೆ:**

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕರಣ (30)(2)(31)ರ ಅನುಗುಣವಾಗಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿದ್ಯಾವಿಷಯಕ್ ಪ್ರಾಧಿಕಾರ ಸಭೆ ಆಯೋಜನೆ ಮಾಡಿ ಮಾನ್ಯ ಕುಲಪತಿಗಳು ಪ್ರಾಸ್ತಾವಿಕವಾಗಿ ಮಾತನಾಡುತ್ತ ಸಭೆಯ ಸರ್ವಸದಸ್ಯರನ್ನು ಸ್ವಾಗತಿಸಿದರು.

ಕುಲಸಚಿವರು ಮತ್ತೊಮ್ಮೆ ಸಭೆಯ ಸದಸ್ಯರನ್ನು ಸ್ವಾಗತಿಸಿ ವಿಷಯ ಸೂಚಿಗಳನ್ನು ಪ್ರಸ್ತಾಪಿಸಿದರು.

| ಕ್ರಮ ಸಂಖ್ಯೆ | ಸಂಖ್ಯೆ | ಕಾರ್ಯಸೂಚಿ ವಿವರ ಹಾಗೂ ಕೈಗೊಂಡ ತೀರ್ಮಾನಗಳು |
|---|---|---|
| 1 | 2019/9/01 | ಹಿಂದಿನ ಸಭೆಯ ಗೊತ್ತುವಳಿಗಳನ್ನು ಹಾಗೂ ಅನುಪಾಲನಾ ವರದಿಯನ್ನು ಸಭೆಯ ಮುಂದಿಡುವುದು. |
| | ತೀರ್ಮಾನ | **ಹಿಂದಿನ ಸಭೆಯ ಗೊತ್ತುವಳಿಗಳನ್ನು ಹಾಗೂ ಅನುಪಾಲನಾ ವರದಿಯನ್ನು ಸಭೆಯು ಅನುಮೋದನೆ ನೀಡಿತು.** |
| 2 | 2019/9/02 | ಸ್ನಾತಕೋತ್ತರ ಇಂಗ್ಲೀಷ ಅಧ್ಯಯನ ವಿಭಾಗದ ಪ್ರವೇಶ ಮಿತಿಯನ್ನು 40 ರಿಂದ 80ಕ್ಕೆ ಹೆಚ್ಚಿಸಲು ಬಿ.ಓ.ಎಸ್ ಅಧ್ಯಕ್ಷರು ಸಲ್ಲಿಸಿರುವ ಪ್ರಸ್ತಾವನೆ ಕುರಿತು. |
| | ತೀರ್ಮಾನ | **ಸ್ನಾತಕೋತ್ತರ ಇಂಗ್ಲೀಷ ಅಧ್ಯಯನ ವಿಭಾಗದ ಪ್ರವೇಶ ಮಿತಿಯನ್ನು 50 ಕ್ಕೆ ಹೆಚ್ಚಿಸಲು ಸಭೆಯು ತೀರ್ಮಾನಿಸಿತು.** |
| 3 | 2019/9/03 | ಪಿಎಚ್.ಡಿ. ಸಂಶೋಧನಾ ಅವಧಿ ಮುಗಿದ/ ಪಿಎಚ್.ಡಿ. ಪ್ರೌಢ ಪ್ರಬಂಧವನ್ನು ಸಲ್ಲಿಸುವ ಅವಧಿ ಮುಗಿದ ನಂತರದಲ್ಲಿ ಅವಧಿ ವಿಸ್ತರಣೆಗಾಗಿ ಮನವಿ ಸಲ್ಲಿಸಿದ ವಿದ್ಯಾರ್ಥಿಗಳಿಗೆ ಅವಧಿ ವಿಸ್ತರಣೆಗೆ ಅನುಮತಿ ನೀಡುವ ಕುರಿತು. |
| | ತೀರ್ಮಾನ | **ಪಿಎಚ್.ಡಿ. ಸಂಶೋಧನಾ ಅಧ್ಯಯನದ ಅವಧಿ ಮುಗಿದ ನಂತರ ಅವಧಿ ವಿಸ್ತರಣೆ ಹಾಗೂ ಪಿಎಚ್.ಡಿ. ಪ್ರೌಢ ಪ್ರಬಂಧವನ್ನು ಸಲ್ಲಿಸುವ ಅವಧಿ ಮುಗಿದ ನಂತರ ಅವಧಿ ವಿಸ್ತರಣೆಗೆ ಮನವಿ ಸಲ್ಲಿಸಿರುವ ವಿದ್ಯಾರ್ಥಿಗಳಿಂದ ಹೆಚ್ಚುವರಿ ದಂಡವನ್ನು ವಿಧಿಸಿ, ಸದರಿ ಅವಧಿಗಳನ್ನು ವಿಸ್ತರಣೆ ಮಾಡಲು ಸಭೆಯು ಅನುಮತಿ ನೀಡಿತು.** |
| 4 | 2019/9/04 | ಶ್ರೀಮತಿ ಮೀನಾಕ್ಷಿ ಆರ್. ಕಲ್ಲೂರ ವಿದ್ಯಾವರ್ಧಕ ಸಂಘದ, ಶಿಕ್ಷಣ ಮಹಾವಿದ್ಯಾಲಯವನ್ನು ಸ್ಥಳಾಂತರ ಮಾಡಲು ವಿಶ್ವವಿದ್ಯಾಲಯ ಸ್ಥಳೀಯ ತನಿಖಾ ಸಮಿತಿಯವರು ಪರಿಶೀಲನೆ ಮಾಡಿ ನೀಡಿರುವ ವರದಿಯನ್ನು ಸಭೆಯ ಅನುಸಮರ್ಥನೆಗಾಗಿ ಮಂಡಿಸುವ ಕುರಿತು. |
| | ತೀರ್ಮಾನ | **ಸದರಿ ವಿಷಯಕ್ಕೆ ಸಭೆಯು ಅನುಸಮರ್ಥನೆ ನೀಡಿತು.** |

| | | |
|---|---|---|
| 5 | 2019/9/05 | ಬಂಜಾರಾ ವಿದ್ಯಾವರ್ಧಕ ಸಂಘದ, ಬಂಜಾರಾ ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯದ ಹೆಸರು ಬದಲಾವಣೆಗೆ ವಿನಂತಿಸಿರುವ ಕುರಿತು. |
| | ತೀರ್ಮಾನ | ಸಭೆಯು 'ಬಂಜಾರಾ ವಿದ್ಯಾವರ್ಧಕ ಸಂಘದ, ಮಹಾವಿದ್ಯಾಲಯವನ್ನು "ವಿಜಯಪುರ ಜಿಲ್ಲಾ ಬಂಜಾರಾ ವಿದ್ಯಾವರ್ಧಕ ಸಂಘದ, ಬಂಜಾರಾ ಕಲಾ ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಬಂಜಾರಾ ನಗರ, ಸೊಲಾಪೂರ ರಸ್ತೆ, ವಿಜಯಪುರ –589103 ತಾ: ವಿಜಯಪುರ ಜಿ: ವಿಜಯಪುರ" ಎಂದು ಹೆಸರು ಬದಲಾವಣೆ ಮಾಡಲು ಅನುಮೋದನೆ ನೀಡಿತು. |
| 6 | 2019/9/06 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 2017–18 ನೇ ಸಾಲಿನ ವಾರ್ಷಿಕ ವರದಿಯನ್ನು ಸಭೆಯ ಅನುಮೋದನೆಗಾಗಿ ಮಂಡಿಸುವ ಕುರಿತು. |
| | ತೀರ್ಮಾನ | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 2017–18 ನೇ ಸಾಲಿನ ವಾರ್ಷಿಕ ವರದಿಯನ್ನು ಸಭೆಯು ಪರಿಶೀಲಿಸಿ, ಅನುಮೋದನೆ ನೀಡಿತು ಹಾಗೂ ಸರಕಾರಕ್ಕೆ ಸಲ್ಲಿಸಲು ಸೂಚಿಸಿತು. |

**ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇನ್ನಿತರ ವಿಷಯಗಳು ಹಾಗೂ ತೀರ್ಮಾನಗಳು**

| ಕ್ರ ಸಂಖ್ಯೆ | ಸಂಖ್ಯೆ | ಕಾರ್ಯ ಸೂಚಿ ವಿವರ ಹಾಗೂ ಕೈಗೊಂಡ ತೀರ್ಮಾನಗಳು |
|---|---|---|
| I | 2019/11/I | ಕೆ.ಯು.ಡಿ. ವ್ಯಾಪ್ತಿಯಲ್ಲಿಯ ಪ್ರಥಮ ದರ್ಜೆ ಮಹಾವಿದ್ಯಾಲಯವನ್ನು ರಾ.ಚ.ವಿ.ದ ವ್ಯಾಪ್ತಿಯ ಬಾಗಲಕೋಟೆದ ಗುಳೇದಗುದ್ದಕ್ಕೆ ಸ್ಥಳಾಂತರ ಮಾಡಿ, ಹಾಗೂ ಸದರಿ ಮಹಾವಿದ್ಯಾಲಯದ ಬಿ.ಎ.ಕೋರ್ಸಿಗೆ ಶಾಶ್ವತ ಸಂಯೋಜನೆಗೆ ಸಂಬಂಧಿಸಿದಂತೆ ತನಿಖಾ ಸಮಿತಿಯವರು ಪರಿಶೀಲನೆ ಮಾಡಿ ನೀಡಿರುವ ವರದಿಗೆ ಅನುಮೋದನೆ ನೀಡುವ ಕುರಿತು. |
| | ತೀರ್ಮಾನ | ಕ.ವಿ.ವಿ.ವ್ಯಾಪ್ತಿಯಲ್ಲಿದ್ದ ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯವನ್ನು ರಾ.ಚ.ವಿ.ವಿದ ವ್ಯಾಪ್ತಿಗೆ ಸ್ಥಳಾಂತರ ಮಾಡಿ ಸರ್ಕಾರವು ಆದೇಶಿಸಿದ್ದರ ಪ್ರಯುಕ್ತ ಸದರಿ ಮಹಾವಿದ್ಯಾಲಯದವರು ಶಾಶ್ವತ ಸಂಯೋಜನೆ ಮುಂದುವರಿಕೆಗೆ ಸಲ್ಲಿಸಿದ ಅರ್ಜಿಗಳಿಗೆ ಸಭೆಯು ಅನುಸಮರ್ಥನೆ ನೀಡಿತು ಹಾಗೂ ತನಿಖಾ ಸಮಿತಿಯವರು ಪರಿಶೀಲನೆ ಮಾಡಿ ಶೈಕ್ಷಣಿಕ ಹಾಗೂ ಮೂಲಭೂತ ಸೌಕರ್ಯಗಳ ಕೊರತೆ ಇರುವುದರಿಂದ ತಾತ್ಕಾಲಿಕ ಮುಂದುವರಿಕೆ ಸಂಯೋಜನೆ ನೀಡಿರುವ ವರದಿಗಳಿಗೆ ಅನುಮೋದನೆ ನೀಡಿತು. |
| II | 2019/11/II | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ದಶಕೋತ್ಸವನ್ನು ಆಚರಿಸುವ ಕುರಿತಂತೆ ಸಭೆಯಲ್ಲಿ ಚರ್ಚಿಸುವ ಕುರಿತು. |
| | ತೀರ್ಮಾನ | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ದಶಕೋತ್ಸವವನ್ನು ಆಚರಿಸುವ ಕುರಿತಂತೆ ಸಭೆಯಲ್ಲಿ ಚರ್ಚಿಸಲಾಯಿತು. ಸಭೆಯು ಸದರಿ ಕಾರ್ಯಕ್ರಮಕ್ಕಾಗಿ ಈ ಕೆಳಕಾಣಿಸಿದಂತೆ ಸಮಿತಿಯನ್ನು ರಚಿಸಲಾಯಿತು. ಮಾನ್ಯ ಕುಲಪತಿಗಳು, ಸದಸ್ಯರುಗಳಿಗೆ ಸದರಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ತಮ್ಮ ಮಾರ್ಗಸೂಚಿ ಹಾಗೂ ಸಲಹೆಗಳನ್ನು ನೀಡುವುದಾಗಿ ಕೇಳಿಕೊಂಡರು. |

| ಕ್ರಮ | ಹೆಸರು | ಪದನಾಮ |
|---|---|---|
| 1 | ಶ್ರೀ. ಬಸವರಾಜ ಎನ್.ಚಿಕ್ಕನಗೌಡರ | ಅಧ್ಯಕ್ಷರು |
| 2 | ಪ್ರೊ. ಡಿ.ಎನ್. ಪಾಟೀಲ | ಸದಸ್ಯರು |
| 3 | ಡಾ. ಎಚ್. ಐ. ತಿಮ್ಮಾಪೂರ | ಸದಸ್ಯರು |
| 4 | ಪ್ರೊ. ಎಂ.ಎನ್. ಮಾವಿನಕಟ್ಟಿ | ಸದಸ್ಯರು |

| | | |
|---|---|---|
| III | 2019/11/III | ಎಂ.ಫಿಲ್./ಪಿಎಚ್.ಡಿ. ಪದವಿ ಪ್ರವೇಶಕ್ಕಾಗಿ ಅಂಗವೈಫಲ್ಯ ಹೊಂದಿರುವವರನ್ನು ನೇಮಿಸಿಕೊಳ್ಳಲು ಯುಜಿಸಿಯ ಮಾರ್ಗಸೂಚಿಯಂತೆ "ವಿಶೇಷ ಪ್ರವೇಶ ಡ್ರೈವ್" ಅಳವಡಿಸಿಕಪಳ್ಳಲು ಸಭೆಯ ಅನುಮೋದನೆ ಕುರಿತು. |
| | ತೀರ್ಮಾನ | ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಸಭೆಯಲ್ಲಿ ಚರ್ಚಿಸಲಾಯಿತು. ಬೇರೆ ಬೇರೆ ವಿಭಾಗವೆಂದು ಪರಿಗಣಿಸದೇ ವಿಶ್ವವಿದ್ಯಾಲಯವನ್ನು ಒಂದು ಘಟಕವನ್ನಾಗಿ ಮಾಡುವುದಾಗಿ ಸಭೆಯು ಸೂಚಿಸಿತು. Over and above quota ದ ಅಡಿಯಲ್ಲಿ ಪ್ರತಿಯೊಂದು ವಿಭಾಗಕ್ಕೆ ಒಂದೊಂದು ಸೀಟ್‌ನ್ನು ಕಾಯ್ದಿರಿಸುವುದು ಎಂದು ಸಭೆಯಲ್ಲಿ ತೀರ್ಮಾನಿಸಲಾಯಿತು. |

ಕೊನೆಯದಾಗಿ ಕುಲಸಚಿವರು(ಮೌ) ಎಲ್ಲ ಸದಸ್ಯರುಗಳಿಗೆ ವಂದನೆಯನ್ನು ಸಲ್ಲಿಸುವುದರ ಮೂಲಕ ಸಭೆಯು ಸಂಪನ್ನಗೊಂಡಿತು.

ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು

ಕುಲಪತಿಗಳು ಹಾಗೂ ಅಧ್ಯಕ್ಷರು

ಇವರಿಗೆ,

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಎಲ್ಲ ಗೌರವಾನ್ವಿತ ವಿದ್ಯಾವಿಷಯಕ್ ಪರಿಷತ್ ಸದಸ್ಯರುಗಳಿಗೆ,

ಪ್ರತಿ ಮಾಹಿತಿಗಾಗಿ :

ಹಣಕಾಸು ಅಧಿಕಾರಿಗಳು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.